Deposition Sheets (RP.No.57) Form No.4

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 661/2022**

ಪಿ.ಡಬ್ಲ್ಯು : 6 ಸಿ.ಡಬ್ಲ್ಯು : 12

ಸಾಕ್ಷಿದಾರನ ಹೆಸರು : ವಿಜೇಶ್

ತಂದೆಯ ಹೆಸರು : ಗೋಪಾಲ್

ಪ್ರಾಯ : 35 ವರ್ಷ

ಉದ್ಯೋಗ : ಕೂಲಿ

ವಾಸ : ಚೇತನಹಳ್ಳಿ, ಕಾರ್ಕಳ

ದಿನಾಂಕ 19-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಆರೋಪಿಯ ಪರಿಚಯವಿದೆ.

ಸುಮಾರು 4-5 ವರ್ಷಗಳ ಹಿಂದೆ ನಾನು ಕಾರ್ಕಳ ಬೈಪಾಸ್ ನಲ್ಲಿ ನಿಂತಿರುವಾಗ ಪೋಲಿಸರು ಒಂದು ದಾಖಲೆಗೆ ಸಹಿ ಹಾಕಲು ಹೇಳಿದ್ದು, ಅದರಂತೆ ನಾನು ಸಹಿ ಹಾಕಿರುತ್ತೇನೆ. ನನ್ನನ್ನು ಪೋಲಿಸರು ಠಾಣೆಗೆ ಬರಮಾಡಿಕೊಂಡು ಇಲಾಖಾ ಜೀಪಿನಲ್ಲಿ ಎಲ್ಲಿಗೂ ಕರೆದುಕೊಂಡು ಹೋಗಿರುವುದಿಲ್ಲ. ನನ್ನ ಸಮಕ್ಷಮ ಆರೋಪಿ ತೋರಿಸಿಕೊಟ್ಟಂತೆ ಯಾವುದೇ ಮಹಜರು ಮಾಡಿರುವುದಿಲ್ಲ ಹಾಗೂ ಮಹಜರಿಗೆ ಬೇರೆ ಯಾರು ಸಹಿ ಹಾಕಿರುತ್ತಾರೆ, ಯಾವ ಸಮಯದಲ್ಲಿ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ.

ಸಾಕ್ಷಿಯು ಆರೋಪಿ ತೋರಿಸಿಕೊಟ್ಟಂತೆ ಸ್ಥಳ ಮಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ಮಹಜರನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-7 ಮಹಜರು ವೇಳೆ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ಭಾವಚಿತ್ರಕ್ಕೆ ನಿಲ್ಲುವಂತೆ ಹೇಳಿದ್ದು ಅದರಂತೆ ಭಾವಚಿತ್ರ ತೆಗೆಸಿಕೊಂಡಿರುತ್ತೇನೆ. ಯಾವ ಉದ್ದೇಶಕ್ಕಾಗಿ ಭಾವಚಿತ್ರ ತೆಗೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರು:-**

ದಿಃ 26-02-2021 ರಂದು ಪೋಲಿಸರು ನನ್ನನ್ನು ಕಾರ್ಕಳ ನಗರ ಠಾಣೆಗೆ ಬರಮಾಡಿಕೊಂಡು, ಆರೋಪಿಯನ್ನು ಸೇರಿದಂತೆ ಚಾಸಾ-11 ರವರ ಜೊತೆ ಇಲಾಖಾ ಜೀಪಿನಲ್ಲಿ ಕರೆದುಕೊಂಡು ಆರೋಪಿ ತೋರಿಸಿಕೊಟ್ಟಂತೆ ಕಾರ್ಕಳ ತಾಲೂಕು, ಸಾಣೂರು ಗ್ರಾಮದ, ಪುಲ್ಕೇರಿ ಬಳಿ ಕರೆದುಕೊಂಡು ಹೋಗಿ ಬೆಳ್ಳಿಗ್ಗೆ 10.00 ಗಂಟೆಯಿಂದ 11.00 ಗಂಟೆಯವರೆಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರಿಗೆ ನಕಲಿ ನಂಬರ್ ಪ್ಲೇಟ್ ತಯಾರಿಸಿದ ಸ್ಥಳ ಮಹಜರು ಮಾಡಿ, ಭಾವಚಿತ್ರ ತೆಗೆದು ಸ್ಥಳದಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ : ಶ್ರೀಮತಿ ಕೆ.ಎಸ್ ವಕೀಲರಿಂದ ಃ ಏನೂ ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ